**ದಿನಾಂಕ 19-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ಪ್ರತಿವಾದಿಯರ ಪರ ಶ್ರೀ ಎಸ್.ಎ., ವಕೀಲರಿಂದಃ**

ನಾನು 2008-09 ರ ಸಾಲಿನಲ್ಲಿ ಸಿಂಡಿಕೇಟ್ ಬ್ಯಾಂಕಿನ ಬಜಗೋಳಿ ಶಾಖೆಯಲ್ಲಿ ಸಹಾಯಕ ಮ್ಯಾನೇಜರ್ ಎಂದು ಕೆಲಸ ಮಾಡುತ್ತಿದ್ದೆನು. ನನಗೆ ವಿವಿಧ ರೀತಿಯ ಕರಾರುಗಳ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ನಾನು ಬಜಗೋಳಿಯಲ್ಲಿ ಕೆಲಸ ಮಾಡುವ ಸಮಯ ವಾದ ಪತ್ರದಲ್ಲಿ ಕಾಣಿಸಿದ ವಿಳಾಸದ ಮನೆಯನ್ನು ಹೊಂದಿದ್ದೆನು. ಸದರಿ ಸಮಯ ನನ್ನ ಮನೆಯಲ್ಲಿ ನನ್ನ ಜೊತೆ ಹೆಂಡತಿ ಮಕ್ಕಳು ವಾಸವಾಗಿದ್ದರು.

2. ನಿಪಿ.1 ಕರಾರು ಆಗುವ ಒಂದು ತಿಂಗಳ ಮೊದಲು ನಾನು ದಾವಾ ಆಸ್ತಿಗೆ ಸಂಬಂದಿಸಿದ ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ. ಆ ಬಳಿಕವೇ ಕರಾರನ್ನು ಮಾಡಿಕೊಂಡಿರುತ್ತೇನೆ. ನಾವು ಹಾಗೂ ಪ್ರತಿವಾದಿ ಪರಸ್ಪರ ಮಾತುಕತೆ ಮಾಡಿ ಚರ್ಚಿಸಿ ನಿಪಿ.1 ಕರಾರನ್ನು ತಯಾರಿಸಿರುತ್ತೇವೆ ಎಂದರೆ ಸರಿ. ನಿಪಿ.1 ಕರಾರನ್ನು ಪ್ರತಿವಾದಿ ಪರ ವಕೀಲರ ಕಛೇರಿಯಲ್ಲಿ ಇದ್ದ ಗೋಪಾಲ ಕುಕ್ಕಾಜೆ ಬಳಿ ತಯಾರಿಸಿರುತ್ತೇನೆ. ನಿಪಿ.1 ರಲ್ಲಿ ಸದರಿ ಗೋಪಾಲ ಕುಕ್ಕಾಜೆ ಕರಾರು ತಯಾರಿಸಿದ ಬಗ್ಗೆ ಕಾಣಿಸುತ್ತದೆಯೇ ಎಂದರೆ ಇಲ್ಲ, ಆದರೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎನ್ನುತ್ತಾರೆ. ನಿಪಿ.1 ಕರಾರು ತಯಾರಾದ ದಿನಾಂಕ ನನಗೆ ಗೊತ್ತಿಲ್ಲ, ಸಹಿ ಮಾಡಿರುವುದು 07-12-2008 ರಂದು. ನಾನು ಸದರಿ ಗೋಪಾಲ ಕುಕ್ಕಾಜೆಯವರಿಗೆ ನಿಪಿ.1 ನ್ನು ತಯಾರಿಸಲು ಅನುಭವ ನೀಡಿರುವುದಿಲ್ಲ. ನಿಪಿ.1 ನ್ನು ನಾನು ಓದಿ ಅರ್ಥ ಮಾಡಿಕೊಂಡಿರುತ್ತೇನೆ. ನಿಪಿ.1 ರ ಸಮಯ ರೂಪಾಯಿ ಒಂದು ಲಕ್ಷವನ್ನು ಮುಂಗಡ ಹಣವಾಗಿ ಪ್ರತಿವಾದಿಗೆ ಪಾವತಿಸಿರುತ್ತೇನೆ. ಸದರಿ ದಿನಾಂಕದಂದು ಎಷ್ಟು ಮೊತ್ತ ಪಾವತಿಸಬೇಕಾಗಿತ್ತು ಎಂದರೆ ನನ್ನ ಪ್ರಕಾರ ಒಂದೇ ಲಕ್ಷ ಇರುತ್ತದೆ. ಸಾಕ್ಷಿದಾರರಿಗೆ ನಿಪಿ.1 ರ ಪ್ರಕಾರ ಹತ್ತು ಲಕ್ಷ ಮುಂಗಡ ಹಣ ಪಾವತಿಸಬೋೇಕಗಿತ್ತು ಎಂದರೆ ಸರಿ. ಆದರೆ ನಾನು ಒಂದು ಲಕ್ಷ

ಪಾವತಿಸಿದ್ದೇನೆ ಎನ್ನುತ್ತಾರೆ. ಸದರಿ ಒಂದು ಲಕ್ಷ ಪಾವತಿ ಮಾಡಿದ ಬಗ್ಗೆ ರಶೀದಿ ನಿಪಿ.1 ರ ಜೊತೆಯೇ ಲಗತ್ತಿಸಲಾಗಿದೆ.

3. ನಿಪಿ.1 ರ ಪ್ರಕಾರ ಆರು ತಿಂಗಳಿನ ಒಳಗಾಗಿ ಕ್ರಯ ಸಾಧನ ಬರೆಯಿಸಬೇಕಾಗಿತ್ತು ಎಂದರೆ ಸರಿಯಲ್ಲ. ನಿಪಿ.1 ರ ಷರತ್ತು ನಂಬ್ರ.10 ರ ಪ್ರಕಾರ ಆ ರೀತಿ ಷರತ್ತು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು, ಸದರಿ ಆಸ್ತಿಯಲ್ಲಿ ಬಾಡಿಗೆದಾರರು ಇದ್ದ ಕಾರಣ ಅವರನ್ನು ಒಕ್ಕಲೆಬ್ಬಿಸುವ ಪ್ರಕ್ರಿಯೆ ಬಾಕಿ ಇದ್ದ ಕಾರಣ ಕ್ರಯ ಸಾಧನ ತಯಾರಿಸಲು ಸಾಧ್ಯವಾಗಿಲ್ಲ ಎನ್ನುತ್ತಾರೆ. ಸದರಿ ನಿಪಿ.1 ರ ಪ್ರಕಾರ ಒಕ್ಕಲೆಬ್ಬಿಸುವ ಜವಾಬ್ದಾರಿ ಕೂಡ ನನ್ನದೇ ಆಗಿತ್ತು ಹಾಗೂ ಅದರ ಪೂರ್ವದಲ್ಲಿಯೇ ಕ್ರಯ ಸಾಧನವನ್ನು ನಾನು ಬರೆಯಿಸಿಕೊಳ್ಳಬೇಕಾಗಿತ್ತು ಎಂದರೆ ಸರಿಯಲ್ಲ. ನಾನು ನಿಪಿ.1 ರ ಷರತ್ತನ್ನು ನಿರ್ವಹಿಸಿಲ್ಲ ಎಂದರೆ ಸರಿಯಲ್ಲ.

4. ನಿಪಿ.1 ಕರಾರಿನ ಆರು ತಿಂಗಳ ನಂತರ ನಾನು ಪ್ರತಿವಾದಿಗೆ ನೋಟೀಸು ನೀಡಿರುವುದಿಲ್ಲ. ನಾನು ಉಳಿದ ಮೊತ್ತವಾದ ರೂಪಾಯಿ ಐವತ್ತಾರು ಲಕ್ಷವನ್ನು ತಯಾರಿಟ್ಟ ಬಗ್ಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ, ನಾನು ರೂಪಾಯಿ ಹತ್ತು ಲಕ್ಷ ಪಾವತಿ ಮಾಡಿದ್ದೇನೆ ಎನ್ನುತ್ತಾರೆ.

5. ನಿಪಿ.2 ಪಾವತಿ ರಶೀದಿಯನ್ನು ಗೋಪಾಲ ಕುಕ್ಕಾಜೆಯವರು ಪ್ರತಿವಾದಿ ಪರ ವಕೀಲರ ಕಛೇರಿಯಲ್ಲಿಯೇ ತಯಾರಿಸಿರುತ್ತಾರೆ. ಸದರಿ ಗೋಪಾಲ ಕುಕ್ಕಾಜೆ ಎನ್ನುವ ವ್ಯಕ್ತಿ ಪ್ರತಿವಾದಿ ಪರ ವಕೀಲರ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ.2 ನ್ನು ದಿನಾಂಕ 10-12-2008 ರಂದು ತಯಾರಿಸಲಾಗಿದೆ. ಸದರಿ ವಾರ ನನಗೆ ನೆನಪಿಲ್ಲ. ನಾನು ರೂಪಾಯಿ ಐದು ಲಕ್ಷವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ನಿಪಿ.2 ರಲ್ಲಿ ಕಾಣಿಸುವ ಸಹಿ ಪ್ರತಿವಾದಿಯದ್ದಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ, ಸದರಿ ರಶೀದಿಯನ್ನು ಪ್ರತಿವಾದಿ ತನ್ನ ಮನೆಯಲ್ಲಿ ನನಗೆ

ನೀಡಿರುತ್ತಾರೆ ಎನ್ನುತ್ತಾರೆ. ನಿಪಿ.2 ನ್ನು ನಾನು ನಿಪಿ.1 ಕರಾರಿಗೆ ಅನುಗುಣವಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

6. ನಿಪಿ.3 ನ್ನು ಕೂಡ ಗೋಪಾಲ ಕುಕ್ಕಾಜೆ ತಯಾರಿಸಿರುತ್ತಾರೆ. ಸದರಿ ಸಮಯ ನಾನು ಹಾಜರು ಇದ್ದೆನು. ಕಂದಾಯ ಸ್ಟಾಂಪಿನ ಮೇಲೆಯೇ ಸಹಿ ಮಾಡಬೇಕು ಎನ್ನುವ ಜ್ಞಾನ ನನಗೆ ಇರುತ್ತದೆ. ದಿನಾಂಕ 20-12-2008 ರಂದು ರೂಪಾಯಿ ಐದು ಲಕ್ಷವನ್ನು ಕೂಡ ನಾನು ನಗದು ರೂಪದಲ್ಲಿ ಪಾವತಿ ಮಾಡಿದ್ದೇನೆ. ಸದರಿ ಹಣವನ್ನು ನಾನು ಬ್ಯಾಂಕ್ ಖಾತೆಯಿಂದ ಪಡೆದುಕೊಂಡಿರಲಿಲ್ಲ. ಸದರಿ ಹಣವನ್ನು ನನ್ನ ಮನೆಯಿಂದ ತೆಗೆದುಕೊಂಡು ಬಂದಿದ್ದೆನು. ನಿಪಿ.3 ರಲ್ಲಿ ಕಾಣಿಸುವ ಸಹಿ ಪ್ರತಿವಾದಿಯದ್ದಲ್ಲ ಎಂದರೆ ಸರಿಯಲ್ಲ. ನಿಪಿ.3 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

7. ನಿಪಿ.1 ಕರಾರು ಆದ ಆರು ತಿಂಗಳ ನಂತರ ರೂಪಾಯಿ ಐವತ್ತಾರು ಲಕ್ಷ ನನ್ನ ಬ್ಯಾಂಕ್ ಖಾತೆಯಲ್ಲಿ ಇರಲಿಲ್ಲ, ಆದರೆ ನನ್ನ ಬಳಿ ಇತ್ತು. ಸದರಿ ಸಮಯ ನನ್ನ ಬಳಿ ಯಾವುದೇ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಒಂದು ಅಂಚೆ ಲಕೋಟೆಯನ್ನು ತೋರಿಸಲಾಗಿ, ಅದರಲ್ಲಿ ಇರುವ ವಿಳಾಸ ನನ್ನ ಮನೆಯ ವಿಳಾಸ ಎಂದು ಅವರು ಒಪ್ಪಿಕೊಂಡಿರುತ್ತಾರೆ. ಸದರಿ ಅಂಚೆ ಲಕೋಟೆಯನ್ನು ಅಂಚೆ ಪಾಲಕರು ದಿನಾಂಕ 11-04-2009 ರಂದು ನನಗೆ ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಯಲ್ಲಿ ಸಾಕ್ಷಿದಾರರು ವಿಳಾಸವನ್ನು ಮಾತ್ರ ಒಪ್ಪಿಕೊಂಡಿರುವ ಕಾರಣ ನ್ಯಾಯಾಲಯದ ಪರಿಶೀಲನೆಗಾಗಿ ಸದರಿ ಅಂಚೆ ಲಕೋಟೆ ಹಾಗೂ ಅಂಚೆ ಸ್ವೀಕೃತಿಯನ್ನು ಒಟ್ಟಾಗಿ ನಿಸಿ.1 ಮತ್ತು 2 ಎಂದು ಗುರುತಿಸಲಾಯಿತು. ನಿಸಿ.1 ರಂತೆ ಪ್ರತಿವಾದಿ ಕ್ರಯ ಸಾಧನ ಬರೆದುಕೊಡುವಂತೆ ನನಗೆ ನೋಟೀಸು ಕಳುಹಿಸಿದ್ದರು ಎಂದರೆ ನನ್ನ ಗಮನಕ್ಕೆ ಬಂದಿಲ್ಲ. ಸಾಕ್ಷಿ ಮುಂದುವರಿದು, ಪ್ರತಿವಾದಿ ಹಾಗೂ ಅವರ ಪರ ವಕೀಲರು ಬಾಡಿಗೆದಾರ ಇದ್ದ ಕಾರಣ ಕ್ರಯ ಸಾಧನ ಬರೆಯುವುದನ್ನು ಮುಂದೂಡುತ್ತಾ ಇದ್ದರು ಎನ್ನುತ್ತಾರೆ. ನಿಸಿ.1 ನೋಟೀಸು ಬಗ್ಗೆ ಅಂಚೆ ಪಾಲಕ ನನಗೆ ತಿಳುವಳಿಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಬಳಿ ಕ್ರಯ

ಸಾಧನ ಬರೆಯಿಸಿಕೊಳ್ಳಲು ಸಾಕಷ್ಟು ಹಣವಿಲ್ಲದ ಕಾರಣ ಸದರಿ ನೋಟೀಸನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

8. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮಿಸ್ ಕೇಸ್ ಅರ್ಜಿ ಸಲ್ಲಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿದ್ದೆನು. ಸದರಿ ಅರ್ಜಿಯಲ್ಲಿ ವಾದ ಪತ್ರದಲ್ಲಿ ಕಾಣಿಸಿದ ವಿಳಾಸವನ್ನೇ ಕಾಣಿಸಿರುತ್ತೇನೆ. ನಾನು ಉದ್ದೇಶ ಪೂರ್ವಕವಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರತಿವಾದಿಯ ವಿಳಾಸವನ್ನು ತಪ್ಪಾಗಿ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ.

9. ನಾನು ಪ್ರತಿವಾದಿಯನ್ನು ಮೌಖಿಕವಾಗಿ ಸಂಪರ್ಕ ಮಾಡುತ್ತಿದ್ದೆನು. ನಾನು ವೈಯಕ್ತಿಕವಾಗಿ ಭೇಟಿಯಾಗುತ್ತಿದ್ದೆನು, ದಿನಾಂಕವನ್ನು ನೆನಪಿಟ್ಟುಕೊಂಡಿಲ್ಲ.  ನಿಪಿ.1 ಕರಾರು ಆದ ಬಳಿಕ ಹಾಗೂ ರೂಪಾಯಿ ಒಂದು ಲಕ್ಷ ಪಾವತಿ ಮಾಡಿದ ಬಳಿಕ ಯಾವತ್ತೂ ಕೂಡ ನಾನು ಪ್ರತಿವಾದಿಯನ್ನು ಭೇಟಿ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಲಿಖಿತವಾಗಿ ಪ್ರತಿವಾದಿಗೆ ನೋಟೀಸು ನೀಡಲು ತೊಂದರೆ ಇರಲಿಲ್ಲ.

10. ದಾವಾ ಆಸ್ತಿಯಲ್ಲಿ ಬಾಡಿಗೆದಾರರನ್ನು ಒಕ್ಕಲೆಬ್ಬಿಸಲು ರೂಪಾಯಿ ಎಪ್ಪತ್ತು ಸಾವಿರ ಪಾವತಿ ಮಾಡಿದ ಬಗ್ಗೆ ದಾಖಲಾತಿ ಇದೆಯೇ ಎಂದರೆ ಸಾಕ್ಷಿ, ಪ್ರತಿವಾದಿ ಪರ ವಕೀಲರಿಗೆ ನಾನು ಸದರಿ ಹಣ ನಗದಾಗಿ ಪಾವತಿ ಮಾಡಿದ್ದೇನೆ ಎಂದು ಪಾಟೀ ಸವಾಲು ಮಾಡುವ ವಕೀಲರನ್ನೇ ತೋರಿಸಿರುತ್ತಾರೆ. ಈ ಬಗ್ಗೆ ನಾನು ನನ್ನ ವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ. ನಾನು ಅಗತ್ಯವಿದ್ದಾಗ ನನ್ನ ದಿನಚರಿ ಪುಸ್ತಕ ಬರೆಯುತ್ತಿದ್ದೆನು. ನನ್ನ ಸದರಿ ಪುಸ್ತಕದಲ್ಲಿ ಯಾರಿಗೆ ಎಷ್ಟು ಹಣ ಪಾವತಿ ಮಾಡುತ್ತಿದ್ದೆನು ಎಂದು ಬರೆಯುವುದಿಲ್ಲ. ನಾನು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳುವಂತೆ ಯಾವುದೇ ಹಣವನ್ನು ಯಾರಿಗೂ ಕೂಡ ಪಾವತಿಸಿಲ್ಲ ಎಂದರೆ ಸರಿಯಲ್ಲ.

11. ಸುಮಾರು 2016 ರಲ್ಲಿ ಪ್ರತಿವಾದಿ ಹೆಚ್ಚಿನ ಕ್ರಯದ ಮೊತ್ತಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಸದರಿ ಬೇಡಿಕೆಯನ್ನು ಮೌಖಿಕವಾಗಿ ಇಟ್ಟಿರುತ್ತಾರೆ. ಯಾವತ್ತೂ ಕೂಡ ಪ್ರತಿವಾದಿ ಹೆಚ್ಚುವರಿ ಖರೀದಿ ಮೊತ್ತಕ್ಕೆ ಬೇಡಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ದಿನಾಂಕ 30-06-2019 ರಂದು ನಿವೃತ್ತಿ ಹೊಂದಿರುತ್ತೇನೆ. ನಾನು ಕೆಲಸ ಮಾಡುವ ಬ್ಯಾಂಕಿನಲ್ಲಿ ಇನ್ ವರ್ಡ್ ಪುಸ್ತಕ ಇತ್ತು. ದಿನಾಂಕ 09-04-2009 ರಂದು ನಿಸಿ.1 ರಂತೆ ಇನ್ನೊಂದು ನೋಟಿಸನ್ನು ನಾನು ಕೆಲಸ ಮಾಡುವ ಕಛೇರಿಗೆ ಪ್ರತಿವಾದಿ ಕಳುಹಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ನೋಟೀಸು ನನಗೆ ಜಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ಇನ್ ವರ್ಡ್ ಪುಸ್ತಕದಲ್ಲಿ ಕಂಡು ಬರುತ್ತದೆ ಎಂದರೆ ಸಾಕ್ಷಿ, ವೈಯಕ್ತಿಕವಾಗಿ ನೋಟೀಸು ಬಂದರೆ ಇನ್ ವರ್ಡ್ ಪುಸ್ತಕ ದಲ್ಲಿ ನಮೂದು ಮಾಡುವುದಿಲ್ಲ ಎನ್ನುತ್ತಾರೆ. ಸದರಿ ಇನ್ ವರ್ಡ್ ಪುಸ್ತಕವನ್ನು ಮಾನ್ಯ ನ್ಯಾಯಾಲಯದಲ್ಲಿ ಹಾಜರುಪಡಿಸಬಹುದೇ ಎಂದರೆ ಸಾಧ್ಯವಿಲ್ಲ. ಆ ರೀತಿ ಇನ್ ವರ್ಡ್ ಪುಸ್ತಕ ಹಾಜರುಪಡಿಸಿದರೆ ನೋಟೀಸು ಜಾರಿಯಾಗಿರುವುದು ಕಂಡು ಬರುವ ಕಾರಣ ಅದನ್ನು ನಾನು ಹಾಜರುಪಡಿಸಲು ನಿರಾಕರಿಸುತ್ತಿದ್ದೇನೆ ಎಂದರೆ ಸರಿಯಲ್ಲ.

12. ನಿಪಿ.8 ನೋಟೀಸು ನೀಡುವ ಪೂರ್ವದಲ್ಲಿ ನಾನು ಪ್ರತಿವಾದಿಗೆ ಯಾವುದೇ ನೋಟೀಸು ಕಳುಹಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯ ಕ್ರಯ ಸಾಧನ ಬರೆಯಿಸಿಕೊಳ್ಳಲು ದಾಖಲಾತಿಗಳನ್ನು ತಯಾರು ಇಟ್ಟಿದ್ದೀರಾ ಎಂದರೆ ಸಾಕ್ಷಿ, ಪ್ರತಿವಾದಿ ದಾಖಲಾತಿಯನ್ನು ತಯಾರು ಇಟ್ಟಿಕೊಳ್ಳಬೇಕು ಎನ್ನುತ್ತಾರೆ. ನಾನಾಗಿ ಉಪನೋಂದಾವಣಾಧಿಕಾರಿ ಕಛೇರಿಗೆ ಹೋಗಿರುವುದಿಲ್ಲ. ನಾನು ಪ್ರತಿವಾದಿಗೆ ರೂಪಾಯಿ ಒಂದು ಲಕ್ಷ ಹೊರತುಪಡಿಸಿ ಬೇರೆ ಯಾವುದೇ ರೀತಿ ಹಣವನ್ನು ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ಒಕ್ಕಲೆಬ್ಬಿಸುವ ಪ್ರಕ್ರಿಯೆಗೂ ಆರು ತಿಂಗಳ ಒಳಗಾಗಿ ಕ್ರಯ ಸಾಧನ ಬರೆದುಕೊಡುವ ಪ್ರಕ್ರಿಯೆಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಯಾವತ್ತೂ ದಾವಾ ಆಸ್ತಿಯನ್ನು ಕ್ರಯ ಸಾಧನ ಮೂಲಕ ಖರೀದಿಸಲು ತಯಾರು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ.1 ಕರಾರಿನ ಷರತ್ತನ್ನು

ನಾನೇ ಉಲ್ಲಂಘಿಸಿದ್ದು. ಪ್ರತಿವಾದಿ ಯಾವತ್ತೂ ಕರಾರು ಉಲ್ಲಂಘನೆ ಮಾಡಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ನಾನು ದಾವಾ ನಿವೃತ್ತಿ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ನಿಪಿ.1 ಕರಾರಿನ ಬಳಿಕ ಯಾವತ್ತೂ ಪ್ರತಿವಾದಿಯನ್ನು ವೈಯಕ್ತಿಕವಾಗಿ ಭೇಟಿ ಆಗಿಲ್ಲ ಎಂದರೆ ಸರಿಯಲ್ಲ.

13. ನಿಪಿ.1 ರ ಸಾಕ್ಷಿದಾರ ಗುರುಪ್ರಸಾದ್ ಶೆಣೈ ನನ್ನ ಗೆಳೆಯನಲ್ಲ, ಆದರೆ ಪರಿಚಯದವರು. ನಾನು ಹಾಗೂ ಸದರಿ ಗುರುಪ್ರಸಾದ್ ಶೆಣೈ ಸೇರಿಕೊಂಡು ಪ್ರತಿವಾದಿಗೆ ಮೋಸ ಮಾಡಲು ನಿಪಿ.8 ರಂತೆ ನೋಟೀಸು ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕ 07-06-2009 ರ ಮೊದಲು ಸಂಪೂರ್ಣ ಕ್ರಯದ ಮೊತ್ತವನ್ನು ಪಾವತಿಸುವ ಷರತ್ತು ಇರುತ್ತದೆ ಎಂದರೆ ಸರಿಯಲ್ಲ. ನನ್ನಲ್ಲಿ ಸದರಿ ಕ್ರಯದ ಮೊತ್ತವನ್ನು ಪಾವತಿಸುವ ಸಾಮರ್ಥ್ಯ ಇಲ್ಲದ ಕಾರಣ ತಡವಾಗಿ ಪ್ರಸ್ತುತ ವ್ಯಾಜ್ಯವನ್ನು ಸುಳ್ಳಾಗಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.